ಆದರೆ, ಇದೊಂದು ರಾಜಕೀಯ ಕಾರಣಗಳಿಗಾಗಿ, ವಿನಾಕಾರಣವಾಗಿ ಪರಸ್ಪರ ಸೌಹಾರ್ದತೆಯನ್ನು ಕೆಡಿಸುವ ಪ್ರಯತ್ನವನ್ನು ರಾಜಕೀಯ ಕಾರಣಗಳಿಗಾಗಿ ಮಾಡುತ್ತಿದ್ದಾರೆ. ನಿಮ್ಮ ನಿಲುವು ಪ್ರಕಾರವೇ ಕೂಡ ಸರ್ಕಾರದ ನಿಲುವು ಕೂಡ ಇದೆ. ಖಂಡಿತವಾಗಿಯೂ, ಕರ್ನಾಟಕದ ನೆಲ-ಜಲಗಳ ವಿಚಾರದಲ್ಲಿ ಅದರ ಹಿತಾಸಕ್ತಿಯನ್ನು ಬಲಿಕೊಡುವ ಕೆಲಸವನ್ನು ಈ ಸರ್ಕಾರ ಮಾಡುವುದಿಲ್ಲವೆನ್ನುವ ಆಶ್ವಾಸನೆಯನ್ನು ಕೊಡುತ್ತೇನೆ. ಮಾನ್ಯ ವಿಶ್ವೇಶ್ವರ ಹೆಗಡೆಯವರು, ವಿರೋಧ ಪಕ್ಷದ ನಾಯಕರು ಹೇಳಿದಂತೆ, ಕೇಂದ್ರ ಸರ್ಕಾರಕ್ಕೆ ಈ ಸ್ಪಷ್ಟೀಕರಣವನ್ನು ಕಳುಹಿಸಿಕೊಡುತ್ತಾ, ನಮ್ಮ ಲೋಕ ಸಭಾ ಸದಸ್ಯರು ಕೂಡ ಈ ವಿಚಾರದಲ್ಲಿ ಪ್ರತಿಭಟನೆ ಮಾಡಿದ್ದಾರೆ. ಇನ್ನೂ ಅವರಿಗೆ ಬೇಕಾಗಿರುವ ಮಾಹಿತಿಯನ್ನು ಕೊಡುತ್ತೇವೆ. ಮೊನ್ನೆ ಲೋಕ ಸಭಾ ಸದಸ್ಯರಿಗೆ ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು 4ನೇ ತಾರೀಖು ಕರೆದ ಸಭೆಯಲ್ಲಿ ಈ ವಿಚಾರದ ಎಲ್ಲ ವಿವರಗಳನ್ನು ಅವರಿಗೆ ದಾಖಲೆಗಳ ಮೂಲಕ ನಮ್ಮ ಲೋಕ ಸಭಾ ಸದಸ್ಯರಿಗೆ ಕಳುಹಿಸಿ ಕೊಟ್ಟಿದ್ದಾರೆ. ನಾವು ನಿಮ್ಮ ಜೊತೆಗೆ ಸಹಮತವನ್ನು ವ್ಯಕ್ತಪಡಿಸುತ್ತೇವೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ :- ಕರ್ನಾಟಕದ ಉದಾರತೆ ಎನ್ನುವುದಕ್ಕಿಂತ ದೌರ್ಬಲ್ಯ ಎಂದು ಪಕ್ಕದ ರಾಜ್ಯದವರು ಅಂದುಕೊಳ್ಳಬಾರದು.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):- ಶ್ರೀ ಶ್ರೀರಾಮುಲುರವರು ಪ್ರಮುಖವಾದ ವಿಷಯಕ್ಕೆ ನಿನ್ನೆಯಿಂದ 3-4 ಸಲ ತಮ್ಮ ಕೊಠಡಿಗೆ ಬಂದಿದ್ದರು. ಅವರಿಗೆ 5 ನಿಮಿಷ ಅವಕಾಶ ಕೊಡಿ.

ವಿಷಯ :- ಗುಡಿಕೋಟೆ ಫಿರ್ಕಾದಲ್ಲಿ ಬಿಜೆಪಿ ನಾಯಕರಾದ ಶ್ರೀ ರಾಘವೇಂದ್ರರವರ ಮನೆ ಮೇಲೆ ನಡೆದ ದಾಳಿ ಬಗ್ಗೆ.

ಶ್ರೀ ಬಿ.ಶ್ರೀರಾಮುಲು (ಬಳ್ಳಾರಿ):- ಸಭಾಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳು. ಮೊನ್ನೆ ಗುಡಿಕೋಟೆ ಫಿರ್ಕಾದಲ್ಲಿ ನಮ್ಮ ಬಿಜೆಪಿ ನಾಯಕರಾದ ರಾಘವೇಂದ್ರರವರ ಮನೆ ಮೇಲೆ ಕಾಂಗ್ರೆಸ್ ಕಾರ್ಯಕರ್ತರು ಅಲ್ಲಿ ಶಾಸಕರು, ಮಂತ್ರಿಗಳ ಬೆಂಬಲಿತರು ಎಲ್ಲ ಹೋಗಿ ಸಾವಿರಾರು ಮಂದಿ ಕಾರ್ಯಕರ್ತರನ್ನು ಕರೆದುಕೊಂಡು ಹೋಗಿ ಅವರ ಮನೆಯನ್ನು ತೊರಿಸಿ, ಅವರ ಮನೆಯನ್ನು ಧ್ವಂಸ ಮಾಡಿ, ಒಂದು ಟಾಟಾ ಸುಮೋ, ಒಂದು ಟ್ರಾಕ್ಟರ್ ಅನ್ನು ಸುಟ್ಟು ಕೆರೋಸಿನ್ ಹಾಕಿ ಮನೆಗೆ ಬೆಂಕಿ

ಹಚ್ಚಿ ಇವತ್ತು ಕಾಂಗ್ರೆಸ್‌ನ ಹಳೆಯ ಶಾಸಕರು ಮತ್ತು ಮಂತ್ರಿಗಳ ಕೈವಾಡ ಇದೆ ಎಂದು ಪತ್ರಿಕೆಗಳಲ್ಲಿ ಬಿಡುಗಡೆಯಾಗಿದೆ. ಮೊನ್ನೆ ನಡೆದ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಬಿಜೆಪಿ ಪಕ್ಷಕ್ಕೆ ಹೆಚ್ಚಿನ ಸದಸ್ಯರು ಗೆದ್ದಿದ್ದಾರೆಂದು ಹೇಳಿ ಅಲ್ಲಿ ಇದ್ದ ಮಂತ್ರಿಗಳ ಕೈವಾಡ ಹಿಡಕೊಂಡು ಬಿಟ್ಟು, ಅವರ ಮನೆಯಲ್ಲಿ ತೂರಿ ಅಲ್ಲಿದ್ದ ಸಬ್-ಇನ್ಸ್‌ಪೆಕ್ಟರ್ ಮತ್ತು ಡಿವೈಎಸ್‌ಪಿಯವರು ಶಾಮೀಲಾಗಿ ಅವರ ಮನೆಯಲ್ಲಿದ್ದ ಹೆಣ್ಣು-ಗಂಡು ಮಕ್ಕಳನ್ನು ಸಿಕ್ಕಾಪಟ್ಟೆ ದೌರ್ಜನ್ಯ ಮಾಡಿ ಪ್ರಾಂತ್ಯದ ಗುಡಿಕೋಟೆ ಫಿರ್ಕಾದಲ್ಲಿ ಭಯಭ್ರಾಂತವಾಗಿದೆ. ತಕ್ಷಣವೇ ಸಬ್-ಇನ್ಸ್‌ಪೆಕ್ಟರ್ ಆದ ಚಂದ್ರಪ್ಪ ಮತ್ತು ಡಿಎಸ್‌ಪಿ ಚಂದ್ರಪ್ಪರವರನ್ನು, ಸಬ್-ಇನ್ಸ್‌ಪೆಕ್ಟರ್ ಸೀತಾರಾಮರವರನ್ನು ಸಸ್ಪೆಂಡ್ ಮಾಡಬೇಕು. ರಾಘವೇಂದ್ರರವರ ಹತ್ಯೆಗೆ ಏನು ಪ್ರಯತ್ನ ಮಾಡುತ್ತಿದ್ದಾರೆ. ಅಕಸ್ಮಾತ್ ಆಗಿ ರಾಘವೇಂದ್ರರವರ ಹತ್ಯೆಯಾದರೆ ಸ್ಥಳೀಯ ಶಾಸಕರು ಮತ್ತು ಮಂತ್ರಿಗಳು ಏನಾದರೂ ಕಾರಣರಾಗುತ್ತಾರಾ ? ದಯವಿಟ್ಟು ತಾವೆಲ್ಲರೂ ಕ್ರಮವಾದ ರೀತಿಯಲ್ಲಿ ನಾಯಕರನ್ನು ಒಪ್ಪಿಸಿ, ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ. ಇವತ್ತು ಗುಡಿಕೋಟೆ ಫಿರ್ಕಾದಲ್ಲಿ ವಾಲ್ಮೀಕಿ ಜನಾಂಗದವರು ಜಾಸ್ತಿ ಇರುತ್ತಾರೆ. ಫಿರ್ಕಾದಲ್ಲಿ ಬ್ರಾಹ್ಮಣ ಸಂಬಂಧಪಟ್ಟಿರುವುದರಿಂದ ರಾಘವೇಂದ್ರ ಆಲಿಯಾಸ್ ರಘು ಅವರು ಸಾಕಷ್ಟು ಹೋರಾಟದಿಂದ ಮೇಲೆ ಬರುತ್ತಿದ್ದಾರೆ. ಸ್ಥಳೀಯ ಶಾಸಕರು ಅವರನ್ನು ಹೇಗಾದರೂ ಮಾಡಿ, ಏನೋ ಒಂದು ಮಾಡಿ ಸಾಯಿಸಬೇಕೆಂದು ಹೇಳಿ ಮೊನ್ನೆ ಒಂದು ವರ್ಷದ ಹಿಂದೆ ಅಲ್ಲಿ ಗುಡಿಕೋಟೆ ಫಿರ್ಕಾದಲ್ಲಿ ಬಂಡಿಸುರಯ್ಯ ಹತ್ಯೆಯಾಯಿತು. ಹತ್ಯೆಯಾದ ಮೇಲೆ ಮೊನ್ನೆ ವಾಲ್ಮೀಕಿ ಜನಾಂಗಕ್ಕೆ ಸಂಬಂಧಪಟ್ಟ ಯುವಕ ರಾಜುವನ್ನು ತಡವಿಕೊಂಡು, ತಡವಿಕೊಂಡ ಮೇಲೆ ನಾವು ಇಲ್ಲಿ ಸ್ಥಳೀಯ ಶಾಸಕರಿದ್ದಾರೆ, ಮಂತ್ರಿಗಳಿದ್ದಾರೆ, ಅವರನ್ನು ನಡೆದರೆ ಅವರದೇ ನಡೆಯಬೇಕು, ಬೇರೆಯವರದು ನಡೆಯುವುದಕ್ಕೆ ಬಿಡುವುದಿಲ್ಲವೆಂದು ಹೇಳಿ ಅಲ್ಲಿಯ ಸ್ಥಳೀಯ ಶಾಸಕರ ಬೆಂಬಲಿಗರು ಬಂದು ಶಿವಪ್ರಸಾದ್, ಜಂಬಣ್ಣ, ಅಂಗಡಿ ಈಶ್ವರಪ್ಪ, ಹೋಟೆಲ್ ವೀರಭದ್ರಪ್ಪ, ಸಿನಿಮಾ ಖಾಸಿಂಸಾಬ್‌ರವರು ಅರೆಸ್ಟ್ ಆಗಲಿಲ್ಲ. ಕೊಟ್ಟೂರು ಕ್ಷೇತ್ರದಲ್ಲಿ ಇವತ್ತು ಮೀಸಲಾತಿಯ ಘೋಷಣೆ ಮಾಡುತ್ತಿದ್ದಾರೆ. ಮೀಸಲಾತಿಯ ಘೋಷಣೆ ಮಾಡುವ ಸಂದರ್ಭದಲ್ಲಿ ಇವರು ಅಲ್ಲಿ ಇದ್ದಾರೆ. ಇವತ್ತಿನವರೆಗೂ ಪೋಲೀಸ್‌ನವರು ಅವರನ್ನು ಅರೆಸ್ಟ್ ಮಾಡುತ್ತಿಲ್ಲ. ಅವರು ಇವತ್ತು ನಮ್ಮನ್ನು ಅರೆಸ್ಟ್ ಮಾಡುವುದಕ್ಕೆ ಯಾರು ಬರುತ್ತಾರೆಂದು ಛಾಲೆಂಜ್ ಮಾಡುತ್ತಿದ್ದಾರೆ. ಇಂಥ ದುಸ್ಥಿತಿಗೆ ಬರಬಾರದು. ಖಂಡಿತವಾಗಿಯೂ, ನ್ಯಾಯವನ್ನು ಉಳಿಸಬೇಕೆಂದರೆ, ಬಿಜೆಪಿ ಕಾರ್ಯಕರ್ತರು,

ಮುಖಂಡರು ಉಳಿಯಬೇಕೆಂದರೆ ರಾಘಣ್ಣನವರ ಹತ್ಯೆಯಾಗಬಾರದೆಂದರೆ ಈ ಕೂಡಲೇ ಕ್ರಮವನ್ನು ತೆಗೆದುಕೊಂಡು ಸಬ್–ಇನ್ಸ್‌ಪೆಕ್ಟರ್, ಡಿಎಸ್‌ಪಿಯವರನ್ನು ಸಸ್ಪೆಂಡ್ ಮಾಡಿಸಿ ಎಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್ :– ಈ ಬಗ್ಗೆ ನಿನ್ನೆ ನಡೆದ ವಿಚಾರದ ಬಗ್ಗೆ ಎಸ್‌ಪಿಯವರು ನನಗೆ ಮೌಖಿಕವಾಗಿ ಮಾತನಾಡಿದ್ದಾರೆ. ಆದರೆ, ಇವತ್ತು ಕೇಸ್ ಅನ್ನು ರಿಜಿಸ್ಟರ್ ಮಾಡಿದ್ದಾರೆ. ಕೆಲವರನ್ನು ಅರೆಸ್ಟ್ ಮಾಡಿದ್ದಾರೆ. ಆದರೆ, ಮಾನ್ಯ ಶಾಸಕರು ಹೇಳಿದಂತೆ, ಇನ್ನೂ ಕೆಲವು ಸದಸ್ಯರನ್ನು ಎಫ್‌ಐಆರ್‌ನಲ್ಲಿ ಬಂದಿರುವ ಹೆಸರಿನವರನ್ನು ಅರೆಸ್ಟ್ ಮಾಡಿಲ್ಲ ಎನ್ನವುದನ್ನು ಹೇಳುತ್ತಿದ್ದಾರೆ. ಬೇರೆ ಕಡೆಗೆ ಅವರ ಸಮಕ್ಷಮದಲ್ಲಿ ಮೀಸಲಾತಿಯ ಪ್ರಕ್ರಿಯೆ ನಡೆದಿದೆ. ಅಲ್ಲಿ ಹಾಜರಾಗಿದ್ದರೂ ಕೂಡ ಅವರನ್ನು ಅರೆಸ್ಟ್ ಮಾಡಿಲ್ಲವೆಂದು ಹೇಳುತ್ತಾರೆ. ಈ ವಿಚಾರದಲ್ಲಿ ನಾನು ಎಸ್‌ಪಿಯವರಿಂದ ವರದಿ ತರಿಸಿಕೊಂಡು ಮಾನ್ಯ ಸದಸ್ಯರಿಗೆ ಈ ವಿಚಾರವನ್ನು ತಿಳಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:– ಆವರಿಗೆ ರಕ್ಷಣೆ ಇಲ್ಲದ ಪರಿಸ್ಥಿತಿಯಾಗಿದೆ. ಭಯಾನಕ ವಾತಾವರಣ ನಿರ್ಮಾಣವಾಗಿದೆ. ಯಾವ ರೀತಿ ಬಳ್ಳಾರಿ ಜಿಲ್ಲೆಯಲ್ಲಿ ನಡೆಯುತ್ತಿದೆ ಎಂಬುದು ತಮಗೆ ಗೊತ್ತಿದೆ. ಹೀಗಾಗಿ, ಕೃಷ್ಣಮೂರ್ತಿಯವರಿಗೆ ರಕ್ಷಣೆ ಇಲ್ಲದ ಪರಿಸ್ಥಿತಿ ಇದೆ. ಹೀಗಾಗಿ, ಯಾರು ಕಂಪ್ಲೇಂಟ್ ಕೊಟ್ಟಿದ್ದಾರೆ, ಆ ಕಂಪ್ಲೇಂಟ್ ತೆಗೆದುಕೊಳ್ಳುವುದಿಲ್ಲ. ಆಮೇಲೆ, ಅರೆಸ್ಟ್ ಮಾಡುವುದಿಲ್ಲ. ಇವತ್ತು ಅವರು ರಾಜಾರೋಷವಾಗಿ, ನಮ್ಮನ್ನು ಯಾರು ಅರೆಸ್ಟ್ ಮಾಡುತ್ತಾರೆಂದು ಹೇಳುತ್ತಾರೆ. ಅಂದರೆ, ರಾಜಕೀಯ ಸಪೋರ್ಟ್ ಇದ್ದ ಹಾಗೆ, ಈ ರೀತಿ ಪೋಲೀಸ್ ಇನ್ಸ್‌ಪೆಕ್ಟರ್, ಪಿಎಸ್‌ಐ ಯಾರೂ ಇದರ ಬಗ್ಗೆ ಕೇರ್ ಮಾಡುವುದಿಲ್ಲ. ಹೀಗಾಗಿ, ನಿರ್ಲಕ್ಷ್ಯಮಾಡುವಂಥದ್ದು. ನಾಳೆ ಕಾನೂನು ಸುವ್ಯವಸ್ಥೆ ಹದಗೆಡುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆದಕ್ಕೆ ತಕ್ಷಣವೇ ಪ್ರಮುಖ ಆರೋಪಿಗಳು ಯಾರು ಉಳಿದಿದ್ದಾರೆ, ಅವರು ಯಾರು ಅರೆಸ್ಟ್ ಆಗಲಿಲ್ಲ. ಇವತ್ತು ಸುಮ್ಮನೆ ಏನು ಮಾಡುತ್ತಾರೆ? ಒತ್ತಡ ಬಂದ ಮೇಲೆ ಯಾರೋ ಒಬ್ಬರನ್ನು ಎಕ್ಸ್, ವೈ, ಝಡ್ ಅನ್ನು ಅರೆಸ್ಟ್ ಮಾಡುತ್ತಾರೆ. ಆದರೆ, ನಿಜವಾಗಿ ಯಾರು ಆರೋಪಿಗಳಿದ್ದಾರೆ, ಯಾರು ಒಂದು ಗೂಂಡಾಗಿರಿ ಮಾಡಿರುತ್ತಾರೆ, ಈ ಮರ್ಡರ್ ಮಾಡಲಿಕ್ಕೆ ಹೋಗಿದ್ದಾರೆ, ಅಂಥವರು ಪಾರಾಗುತ್ತಾರೆ. ಅವರು ತಕ್ಷಣ ಅರೆಸ್ಟ್ ಆಗುವ ಅವಶ್ಯಕತೆ ಇದೆ.

ಶ್ರೀ ಕೆ.ಎಸ್. ಈಶ್ವರಪ್ಪ :– ಬಳ್ಳಾರಿ ಜಿಲ್ಲೆಯಲ್ಲಿ ಭಯಾನಕ ಪರಿಸ್ಥಿತಿ ಇದೆ.

ಅಧ್ಯಕ್ಷರು :– ಈಶ್ವರಪ್ಪನವರೆ, ಎಲ್ಲರೂ ಮಾತನಾಡುವುದಕ್ಕೆ ನಿಂತರೆ ಹೇಗೆ ? ಶೂನ್ಯವೇಳೆಯಲ್ಲಿ ಶ್ರೀರಾಮುಲುರವರು 2 ದಿವಸಗಳಿಂದ ಕೇಳುತ್ತಿದ್ದರು. ಕೊಟ್ಟೆ, ಅವರು ನಿಮ್ಮ ವಿರೋಧ ಪಕ್ಷದವರು. ಎಲ್ಲ ನಾಯಕರೂ ಅದರ ಬಗ್ಗೆ ಹೇಳುತ್ತಾ ಹೋದರೆ, ಬೇರೆ ಇದರಲ್ಲಿ ಮಾತನಾಡಿ. ಈ ತರಹವಾದರೆ ಆಗಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ :– ತಾವು ಗಮನಿಸಿಲ್ಲ. ನಾನು ಜನರಲ್ ಆಗಿ ಮಾತನಾಡುವುದಿಲ್ಲ. ಪರಿಸ್ಥಿತಿ ಏನಿದೆ, ಶಾಸಕರ ಜೀವಕ್ಕೆ ರಕ್ಷಣೆ ಇಲ್ಲದ ಪರಿಸ್ಥಿತಿ ಬರುತ್ತದೆ. ತಮಗೆ ಗೊತ್ತಿದೆ. ಬಳ್ಳಾರಿಯಲ್ಲಿ ಭಯಾನಕ ವಾತಾವರಣವಿದೆ. ವಿಶೇಷವಾದ ಫೋರ್ಸ್ ಹಾಕಲು ಪ್ರಯತ್ನವಾಗಬೇಕು ಎಂದು ನಾನು ತಮ್ಮ ಮೂಲಕ ಮನವಿ ಮಾಡುತ್ತೇನೆ. ಸ್ಪೆಷಲ್ ಫೋರ್ಸ್ ಹಾಕಲಿಲ್ಲವೆಂದರೆ ಖಂಡಿತ ಅನೇಕ ಕಗ್ಗೊಲೆಗಳು ಆಗುತ್ತವೆ. ದಯವಿಟ್ಟು ಆ ದಿಕ್ಕಿನಲ್ಲಿ ಗಮನ ಕೊಡಿ.

ಶ್ರೀ ಬಿ. ಶ್ರೀರಾಮುಲು :– ದಯವಿಟ್ಟು, ಈ ಕೂಡಲೇ ಅರೆಸ್ಟ್ ಮಾಡಬೇಕು. ಇಲ್ಲದಿದ್ದರೆ, ಅಲ್ಲಿ ರಾಘವೇಂದ್ರರವರ ಹತ್ಯೆಯಾಗುತ್ತದೆ.

ಅಧ್ಯಕ್ಷರು :– ಆಯಿತು. ಹೇಳುತ್ತಾರೆ.

ಶ್ರೀ ಬಿ. ಶ್ರೀರಾಮುಲು :– ತಕ್ಷಣ ಸಬ್–ಇನ್ಸ್‌ಪೆಕ್ಟರ್, ಡಿಎಸ್‌ಪಿಯವರನ್ನು ವರ್ಗಾವಣೆ ಮಾಡಬೇಕು ಅಥವಾ ಅವರನ್ನು ಸಸ್ಪೆಂಡ್ ಮಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ :– ಮುಖ್ಯ ಆರೋಪಿಗಳ ಬಂಧನವಾಗಲಿಲ್ಲ. ಮತ್ತು ಅಧಿಕಾರಿಗಳು ಅವರ ಕೈ ಜೋಡಿಸಿ ..... ನೀವು ಬಳ್ಳಾರಿ ಜಿಲ್ಲೆಯಿಂದ ಬಂದವರು. ನಿಷ್ಪಕ್ಷವಾದ ತನಿಖೆಯಾಗಿ, ಅಪರಾಧಿಗಳಿಗೆ ಶಿಕ್ಷೆಯಾಗಲಿ. ಯಾರು ಮುಖ್ಯ ಆರೋಪಿಗಳಿದ್ದಾರೆ, ಅವರ ಬಂಧನ ಮಾಡಿ, ಅಧಿಕಾರಿಗಳ ಮೇಲೆ ಏನು ಬೇಕೋ ಕ್ರಮ ತೆಗೆದುಕೊಳ್ಳಿ ಆಗ ಬಿಗಿಯಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ :– ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರರು ವ್ಯಕ್ತ ಮಾಡಿರುವ ಅಭಿಪ್ರಾಯಕ್ಕೆ ನಾವು ನಿಜವಾಗಿಯೂ ಇದನ್ನು ಗಂಭೀರವಾಗಿ

ಪರಿಶೀಲಿಸುತ್ತೇವೆ. ಹಿಂದೆ ಅದೇ ಗುಡಿಕೋಟೆಯಲ್ಲಿ ಈ ಘಟನೆಗಳಿಗಿಂತ ಪೂರ್ವದಲ್ಲಿ ರಾಘವೇಂದ್ರರಾಯರ ಅನುಚರರು ಎನ್ನುವಂಥವರ ಬಗ್ಗೆ ಕೂಡ ಕೊಲೆಯಾಗಿತ್ತು. ಇದೂ ಹಾಗೆಯೇ, ಈ ವೈಷಮ್ಯ ಬೆಳೆದಿರುವ ಹಿನ್ನೆಲೆ ಇದೆ. ಆದರೆ, ಈಗಾಗಲೇ ಕೇಸ್ ರಿಜಿಸ್ಟರ್ ಮಾಡಿದ್ದಾರೆ. ಉತ್ತಮವಾಗಿರುವ ನಮ್ಮ ಎಸ್‌ಪಿಯವರು ಅಲ್ಲಿದ್ದಾರೆ. ಕೇಸ್ ಅನ್ನು ರಿಜಿಸ್ಟರ್ ಮಾಡಿದ್ದಾರೆ. ನನಗೆ ಮೌಖಿಕವಾಗಿ ವಿಷಯ ತಿಳಿಸಿದ್ದಾರೆ. ಆದರೆ, ಎಫ್‌ಐಆರ್‌ನಲ್ಲಿ ಕಾಣಿಸಿರುವ ವ್ಯಕ್ತಿಗಳನ್ನು ಬಂಧಿಸಿಲ್ಲ ಎನ್ನುವುದಿದ್ದರೆ, ನಾನು ಅವರ ಜೊತೆ ಮಾತನಾಡಿ, ಸರಿಯಾದ ಮಾಹಿತಿಯನ್ನು ಮಾನ್ಯ ಶಾಸಕರಿಗೆ ಕಳುಹಿಸಿಕೊಡುತ್ತೇನೆ.

ವಿಷಯ :– ಕಲ್ಪತರು ಗ್ರಾಮೀಣ ಬ್ಯಾಂಕ್‌ಗಳಲ್ಲಿ ಲೂಟಿಯಾಗುತ್ತಿರುವ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :– 2 ತಿಂಗಳ ಹಿಂದೆ ಮುಗುವಾಳ, ಹೊಸಕೋಟೆಯಲ್ಲಿ ಕೆಜಿಬಿ ಬ್ಯಾಂಕ್ ಲೂಟಿಯಾಗಿ 25 ಲಕ್ಷ ರೂಪಾಯಿಗಳಷ್ಟು ಹಣ ಹೋಗಿದ್ದು, ನಾವಿಲ್ಲಿ ಸೋಮವಾರ ಮಾತನಾಡಬೇಕಾದರೆ ಕನಕುಂಟೆ ಎಂದು ಹೇಳಿ ವೈಟ್‌ಫೀಲ್ಡ್‌ನಲ್ಲಿ ಒಂದು ಕೆಜಿಬಿ ಬ್ಯಾಂಕ್ ಅನ್ನು ಹಾಗೇ ಅದೇ ಮಾದರಿಯಲ್ಲಿ, ಬಹುಶಃ ಅದೇ ಗ್ಯಾಂಗ್ ಲೂಟಿ ಮಾಡಿ ಅಲ್ಲಿ ಒಂದು 25–30 ಲಕ್ಷ ರೂಪಾಯಿ ನಷ್ಟವಾಗಿದೆ. ನನ್ನ ಕಾನ್‌ಸ್ಟಿಟ್ಯುಯೆನ್ಸಿಯಲ್ಲಿ ಬಿಳಿಗೆರೆ ಎಂದು ಹೇಳಿ ಇದೆ, ಅಲ್ಲಿ 4 ತಿಂಗಳ ಹಿಂದೆ ಎಸ್‌ಬಿಎಂ ಲೂಟಿಯಾಗಿ 11 ಲಕ್ಷ ರೂಪಾಯಿ ನಷ್ಟವಾಗಿತ್ತು. ಬೆಂಗಳೂರಿನ ಆಜೂಬಾಜಿನಲ್ಲಿ ಇವತ್ತು ಗ್ರಾಮೀಣ ಕೆಜಿಬಿಗಳು, ಕಲ್ಪತರು ಗ್ರಾಮೀಣ ಬ್ಯಾಂಕ್‌ಗಳನ್ನು ನೀವು ಹಳ್ಳಿಗಳಲ್ಲಿ ಮಾಡುವುದಕ್ಕೆ ಆಗುವುದೇ ಇಲ್ಲ. ಇಲ್ಲಿ ಸೆಕ್ಯುರಿಟಿ ಇಲ್ಲ. ಎಲ್ಲ ಬ್ಯಾಂಕ್‌ಗಳೂ ಹೀಗೇ ಸಾರಾಸಗಟಾಗಿ ಲೂಟಿಯಾಗುವ ಸ್ಥಿತಿ ನಿರ್ಮಾಣವಾಗಬಾರದು. ಪೋಲೀಸರು ನಿಷ್ಕ್ರಿಯರಾಗಿದ್ದಾರೆ. ಆ 2 ಬ್ಯಾಂಕ್‌ಗಳು, ಮುಗುವಾಳ ಮತ್ತು ಕನಕುಂಟೆ ಬ್ಯಾಂಕ್‌ಗಳನ್ನು ಲೂಟಿ ಮಾಡಿದ್ದಾರೆ, ಐಡೆಂಟಿಕಲ್ ಗ್ಯಾಂಗ್ ಮಾಡಿದ್ದಾರೆ. ಅದನ್ನು ತಕ್ಷಣ ಏನಾದರೂ ತನಿಖೆ ಮಾಡಿಸಿ, ಕ್ರಮ ತೆಗೆದುಕೊಂಡು ಶಾಸನ ಸಭೆಗೆ ಉತ್ತರ ಹೇಳುತ್ತಾರೆಯೇ ? ಎಂದು ನಾನು ತಮ್ಮ ಮೂಲಕ ಸಚಿವರನ್ನು ಕೇಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ :– ಇದೇ ತರಹ ಆಗಿರುವ ಕೆಜಿಬಿ ವಿಚಾರದಲ್ಲಿ ಕಲ್ಪತರು ಗ್ರಾಮೀಣ ಬ್ಯಾಂಕ್ ಅನ್ನು ದರೋಡೆ ಮಾಡಿರುವುದು, ಈಗಾಗಲೇ 2–3 ಪ್ರಕರಣಗಳು